(ಇಂದು ದಿನಾಂಕಃ **23-08-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

## ಪಾಟೀ ಸವಾಲು ಶ್ರೀ ಆರ್ ಎಂ ಆರ್ ವಕೀಲರಿಂದಃ

ಹನಮಂತಪ್ಪ ಎನ್ನುವವರು ನನ್ನ ಗಂಡನ ಸಹೋದರ. ಜಮೀನು ಸರ್ವೇ ನಂಃ 899/2 ಕ್ಷೇತ್ರ 6 ಎಕರೆ 8 ಗುಂಟೆ ಹಾಗೂ ಸರ್ವೇ ನಂಃ 898/4 ಕ್ಷೇತ್ರ 4 ಎಕರೆ ಜಮೀನುಗಳು ನನ್ನ ಗಂಡ ಹಾಗೂ ಆತನ ಸಹೋದರನ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಜಮೀನುಗಳಲ್ಲಿ ನನ್ನ ಗಂಡ ಹಾಗೂ ಆತನ ಸಹೋದರರ ನಡುವೆ ನೊಂದಾಯಿತ ದಾಖಲೆಯ ಮುಖಾಂತರ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಾಗದ ಪ್ರಕಾರ ಜಮೀನು ಸರ್ವೇ ನಂಃ 899/2 ರಲ್ಲಿ ದಕ್ಷಿಣ ಭಾಗದ ಕ್ಷೇತ್ರ 3 ಎಕರೆ 4 ಗುಂಟೆ ಜಮೀನು ಹಾಗೂ ಸರ್ವೇ ನಂಃ 898/4 ರಲ್ಲಿ ಸಂಪೂರ್ಣ 4 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಾಗದ ಪ್ರಕಾರ ಅವರವರ ಪಾಲಿಗೆ ಬಂದ ಜಮೀನುಗಳು ಅವರವರ ಹೆಸರಿನಲ್ಲಿ ವರ್ಗಾವಣೆಯಾಗಿರುತ್ತವೆ ಎಂದರೆ ಸರಿ.

2. ದಾವಾ ಜಮೀನು ಸರ್ವೇ ನಂಃ 318 ಕ್ಷೇತ್ರ 7 ಎಕರೆ 32 ಗುಂಟೆ ಮುಂಚೆ ಯಲ್ಲವ್ವ ಗಂಃ ಶಿವಬಸಪ್ಪ ಎನ್ನುವವರ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಜಮೀನನ್ನು ಯಲ್ಲವ್ವ ರವರು 1996 ರಲ್ಲಿ ತನ್ನ ಮೊಮ್ಮಗನಾದ ನಿಂಗಪ್ಪ ರವರಿಗೆ ಬಿಟ್ಟು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಯಲ್ಲವ್ವರವರು ಜಮೀನನ್ನು ನನ್ನ ಹೆಸರಿಗೆ ಮಾಡಿದ್ದರ ಬಗ್ಗೆ ನಾನು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ನಾನು ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ಈಗ 1 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ನನ್ನ ಹೆಸರನ್ನು ಕಡಿಮೆ ಮಾಡಿ ಅವರು ತಮ್ಮ ಹೆಸರನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವರ್ಗಾವಣೆ ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ ಆದರೆ ಪ್ರಸ್ತುತ ದಾವೆ ದಾಖಲಿಸಿರುತ್ತೇನೆ.

3. ನಿಂಗಪ್ಪ ನನ್ನ ಹಿರಿಯ ಮಗ. ನನ್ನ ಹೆಣ್ಣು ಮಕ್ಕಳಾದ 5 ಮತ್ತು 6 ನೇ ಪ್ರತಿವಾದಿಯರ ಮದುವೆಯನ್ನು ನಿಂಗಪ್ಪನ ಮದುವೆಗಿಂತ ಮುಂಚೆ ಮಾಡಲಾಗಿರುತ್ತದೆ. ನಿಂಗಪ್ಪನ ಮದುವೆಯಾದ ನಂತರ ನಿಂಗಪ್ಪ, ನಾನು, ಆತನ ಹೆಂಡತಿ ಒಟ್ಟಾಗಿ ವಾಸವಿದ್ದೇವು ಎಂದರೆ ಸರಿ. ಸದರಿ ನಿಂಗಪ್ಪನಿಗೆ 3 ಜನ ಮಕ್ಕಳು ಎಂದರೆ ಸರಿ. ನಂತರವೂ ಸಹ ನಾವು, ನಿಂಗಪ್ಪನ ಮಕ್ಕಳು ಒಟ್ಟಿಗೆ ಇದ್ದೇವು ಎಂದರೆ ಸರಿ. ನಿಂಗಪ್ಪ ಮೃತಪಡುವಕ್ಕಿಂತ ಮುಂಚೆ ಬ್ಯಾಂಕಿನಲ್ಲಿ ಹಾಗೂ ಖಾಸಗಿಯಾಗಿ ಸಾಲ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಮೃತಪಡುವುದಕ್ಕಿಂತ 3-4 ವರ್ಷಗಳ ಮುಂಚೆ ಬಸಾಪೂರ ಗ್ರಾಮದಲ್ಲಿ ಬರಗಾಲವಿತ್ತು ಎಂದರೆ ಸರಿ. ಆಗ

ನಿಂಗಪ್ಪನಿಗೆ ಸಾಲ ನೀಡಿದವರು ಸಾಲ ಮರುಪಾವತಿಸುವಂತೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿ. ಕಾರಣ ಸದರಿಯವನು ಸಾಲ ಬಾಧೆ ತಾಳಲಾರದೆ ದಿನಾಂಕಃ 18-05-2018 ರಂದು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ನಂತರ ಪೋಲೀಸರು ಬಂದು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ವಿಷಯ ಪತ್ರಿಕೆಯಲ್ಲಿ ಪ್ರಕಟಣೆಯಾಗಿರುತ್ತದೆ ಎಂದರೆ ಸರಿ.

4. ನನ್ನ ಮಗ ಮೃತಪಟ್ಟ 1 ವರ್ಷದೊಳಗಾಗಿ ನನ್ನ ಗಂಡ ಮೃತಪಟ್ಟಿರುತ್ತಾನೆ. ನನ್ನ ಗಂಡ ಕ್ಯಾನ್ಸರ್ ಕಾಯಿಲೆಯಿಂದ ಬಳಲಿ ಮೃತಪಟ್ಟಿರುತ್ತಾರೆ. ಸದರಿಯವರು ಮೃತಪಡುವುದಕ್ಕಿಂತ 6 ತಿಂಗಳಗಳ ಮುಂಚೆ ಸದರಿಯವರಿಗೆ ಕ್ಯಾನ್ಸರ್ ಇರುವುದು ಗೊತ್ತಾಗಿರುತ್ತದೆ. ಸದರಿಯವರಿಗೆ ಹುಬ್ಬಳ್ಳಿಯ ನವನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ. ಆಗ ಸದರಿಯವರಿಗೆ 60-70 ವರ್ಷ ವಯಸ್ಸಾಗಿರಬಹುದು. ಸದರಿ ಕಾಯಿಲೆ ಇದ್ದ ವೇಳೆ ಅವರಿಗೆ ನಡೆದಾಡಲು ಆಗುತ್ತಿರಲಿಲ್ಲ, ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಹಾಗೂ ಕಿವಿ ಸರಿಯಾಗಿ ಕೇಳುತ್ತೀರಲಿಲ್ಲ ಎಂದರೆ ಸರಿ. ನನ್ನ ಗಂಡ ಆಸ್ಪತ್ರೆಯಿಂದ ಬಂದು ನಮ್ಮ ಮನೆಯಲ್ಲಿ ಮೃತಪಟ್ಟಿರುತ್ತಾನೆ. ಸದರಿಯವರಿಗೆ ಮೊದಲಿಗೆ ಬಲ ಕಪಾಳಕ್ಕೆ ಆಗಿದ್ದು ಇರುತ್ತದೆ. ನಂತರ ಗುತ್ತಿಗೆಯ ಭಾಗಕ್ಕೆ ಕಾನ್ಸರ್ ಆಗಿದ್ದು 2 ಬಾರಿ ಶಸ್ತ್ರ ಚಿಕಿತ್ಸೆ ಮಾಡಲಾಗಿರುತ್ತದೆ.

5. ದಾವಾ ಜಮೀನು ಸರ್ವೇ ನಂಃ 898/4 ನ್ನು ನನ್ನ ಹೆಸರಿಗೆ ನನ್ನ ಗಂಡ ಮಾಡಿರುತ್ತಾರೆ. ಸದರಿಯವರು ಮೊದಲನೇ ಬಾರಿ ಶಸ್ತ್ರ ಚಿಕಿತ್ಸೆ ಆದ ನಂತರ ಮನೆಗೆ ಬಂದಾಗ ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿರುತ್ತಾರೆ. ಸದರಿ ಆಸ್ತಿ ನನ್ನ ಗಂಡನಿಗೆ ಆತನ ತಂದೆಯಿಂದ ಬಂದ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಗಂಡ ಹಾಗೂ ನನ್ನ ತಂದೆ ಸೇರಿ ದುಡಿದು ಗಳಿಸಿದ ಆಸ್ತಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಗಂಡ ನನ್ನ ಹೆಸರಿಗೆ ಮಾಡಿದ ಆಸ್ತಿಯ ಕುರಿತು ನಾನು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆ ನೊಂದಣಿಯಾಗಿರುತ್ತದೆ. ಸದರಿ ದಾಖಲೆಯನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ. ಸದರಿ ದಾಖಲೆಗೆ ಸಾಕ್ಷಿದಾರರಾಗಿ ನನ್ನ ಜೊತೆ ಯಾರು ಬಂದಿರಲಿಲ್ಲ. ಸದರಿ ದಾಖಲೆಯನ್ನು ಮಾಡುವ ವೇಳೆ ನನ್ನ ಮಗ ಮೃತಪಟ್ಟಿದ್ದನು. ಸದರಿ ದಾಖಲೆ ಆಗುವ ವೇಳೆ 1 ರಿಂದ 4 ನೇ ಪ್ರತಿವಾದಿಯರು ಜೀವಂತ ಇದ್ದರು. ಸದರಿ ದಾಖಲೆಯನ್ನು ತಯಾರಿಸುವ ವೇಳೆ 1 ರಿಂದ 4 ನೇ ಪ್ರತಿವಾದಿಯರ ಒಪ್ಪಿಗೆ ಪಡೆದುಕೊಂಡಿರುವುದಿಲ್ಲ. ಸದರಿ ದಾಖಲೆಯಾದ 1 ವರ್ಷದ ನಂತರ ನನ್ನ ಗಂಡ ಮೃತ ಪಟ್ಟಿರುತ್ತಾನೆ.

6. 5 ಮತ್ತು 6 ನೇ ಪ್ರತಿವಾದಿಯರ ಮದುವೆಯನ್ನು ನಾನು, ನಿಂಗಪ್ಪ ಹಾಗೂ ನನ್ನ ಗಂಡ ನೆರವೇರಿಸಿರುತ್ತೇವೆ ಎಂದರೆ ಸರಿ. ಸದರಿಯವರ ಮದುವೆಯ ಕಾಲಕ್ಕೆ ನಾವು ಸಾಕಷ್ಟು ಹಣ ಮತ್ತು ಬಂಗಾರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅನಾರೋಗ್ಯವಾದಾಗ

ನಿಂಗಪ್ಪ, ಆತನ ಹೆಂಡತಿ ಮಕ್ಕಳು ನನ್ನ ಗಂಡನನ್ನು ಆರೈಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವೇಳೆಗೆ ಅವರೆಲ್ಲರೂ ಸಹ ನಮ್ಮ ಮನೆಯಲ್ಲೇಯೇ ವಾಸವಿದ್ದರು. ನನ್ನ ಮಗ ಮೃತ ಪಟ್ಟ ನಂತರ ನನ್ನ ಗಂಡನ ಚಿಕಿತ್ಸೆಗಾಗಿ 1 ನೇ ಪ್ರತಿವಾದಿ ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ನನ್ನ ಮಗ ಮೃತ ಪಟ್ಟ ನಂತರ ಬಂದ ಹಣವನ್ನು ತೆಗೆದುಕೊಂಡು ಮನೆ ಬಿಟ್ಟು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಮಗ ಮೃತ ಪಟ್ಟ 2 ತಿಂಗಳಗಳ ನಂತರ ಬಂದ ಹಣವನ್ನು ತೆಗೆದುಕೊಂಡು ಮನೆ ಬಿಟ್ಟು ಹೋಗಿರುತ್ತಾರೆ. ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ನನ್ನ ಗಂಡನ ಸಂಪೂರ್ಣ ಆರೈಕೆಯನ್ನು ಮಾಡಿ ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರೂ. 5 ಲಕ್ಷಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಹಣವನ್ನು 1 ನೇ ಪ್ರತಿವಾದಿ ಆಕೆಯ ಗಂಡ ಮಾಡಿದ ಸಾಲಕ್ಕೆ ಮರು ಪಾವತಿ ಮಾಡಿ ಮತ್ತು ತನ್ನ ತವರು ಮನೆಯಿಂದ ಹಣ ತೆಗೆದುಕೊಂಡು ಬಂದು ನನ್ನ ಗಂಡನಿಗೆ ಚಿಕಿತ್ಸೆ ಕೊಡಿಸಿರುತ್ತಾಳೆ ಎಂದರೆ ಸರಿಯಲ್ಲ.

7. ಜಮೀನು ಸರ್ವೇ ನಂಃ 899/2 ಕ್ಷೇತ್ರ 6 ಎಕರೆ 8 ಗುಂಟೆ ಪೈಕಿ 3 ಎಕರೆ 4 ಗುಂಟೆ ಜಮೀನು ಈಗ ನನ್ನ ಗಂಡನ ಹೆಸರಿನಲ್ಲಿರುತ್ತದೆ. ಸದರಿ ಜಮೀನು ಹಾಗೂ ಸರ್ವೇ ನಂಃ 898/4 ಕ್ಷೇತ್ರ 4 ಎಕರೆ ಜಮೀನುಗಳಲ್ಲಿ 1 ರಿಂದ 4 ನೇ ಪ್ರತಿವಾದಿಯರಿಗೂ ಸಹ ಪಾಲು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು 1 ರಿಂದ 4 ನೇ ಪ್ರತಿವಾದಿಯರು ಮಾತ್ರ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಸಾಗುವಳಿ ಮಾಡುತ್ತಿದ್ದೇನೆ ಎನ್ನುತ್ತಾರೆ. ನಾನು ಸಾಗುವಳಿ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆಯನ್ನು ಹಾಜರು ಮಾಡಿಲ್ಲ. ಸದರಿ ಜಮೀನುಗಳಲ್ಲಿ ನನಗೆ ಮತ್ತು 5 ಮತ್ತು 6 ನೇ ಪ್ರತಿವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

8. ನನ್ನ ಗಂಡ ಮೃತ ಪಟ್ಟ ನಂತರ ನಾನು, ಪ್ರತಿವಾದಿ 5 ಮತು್ತ 6 ರವರು ಸೇರಿ 1 ರಿಂದ 4 ನೇ ಪ್ರತಿವಾದಿಯರಿಗೆ ಹೊಡೆ ಮಾಡಿ ಕಿರುಕುಳ ನೀಡಿ ಮನೆ ಬಿಟ್ಟು ಹೊರಹಾಕಿರುತ್ತೇವೆ ಎಂದರೆ ಸರಿಯಲ್ಲ. ಸದರಿಯವರು ಮನೆ ಬಿಟ್ಟು ಹೋಗುವ ಮೊದಲು 1 ನೇ ಪ್ರತಿವಾದಿಯ ತವರು ಮನೆಯವರು ಬಂದು ಅವರನ್ನು ಸರಿಯಾಗಿ ನೋಡಿಕೊಳ್ಳುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರಿಗೆ ಅವಮಾನ ಮಾಡಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

9. ಕೆನರಾ ಬ್ಯಾಂಕಿನಲ್ಲಿ ರೂ. 5 ಲಕ್ಷ ಜಮಾ ಆಗಿದ್ದರ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಬ್ಯಾಂಕಿನವರು ನೀಡಿದರೆ ಹಾಜರು ಪಡಿಸುತ್ತೇನೆ.

10. ನನ್ನ ವಾದ ಪತ್ರದ ಖಂಡಿಕೆ 8 ರಿಂದ 11 ರಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಿ ಪಿ 4 ನ್ನು ನೀಡಿದ್ದಕ್ಕೆ ನಾನು ತಕರಾರು ಸಲ್ಲಿಸಿರುತ್ತೇನೆ. ಸದರಿ ತಕರಾರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸರ್ವೇ ನಂಃ 318 ಕ್ಕೆ ಸಂಬಂಧಿಸಿ ತಹಶೀಲ್ದಾರ ಕಚೇರಿಯಲ್ಲಿ ಪ್ರಕರಣ ನಡೆದಿತ್ತು ಹಾಗೂ ಸದರಿ ಪ್ರಕರಣ ನಮ್ಮ ವಿರುದ್ಧ ಆದೇಶವಾಗಿರುತ್ತದೆ ಎಂದರೆ ಸರಿ. ನಾನು, 5 ಮತ್ತು 6 ನೇ ಪ್ರತಿವಾದಿಯರು ಸೇರಿ 1 ರಿಂದ 4 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**